ಕ್ರಿ.ಮಿ. ನಂ. 771/2023

ಪಿಡಬ್ಲೂ: 1

ಸಾಕ್ಷಿಯನ್ನು ಇಂದು ದಿನಾಂಕ 25-06-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಶ್ರೀ ಎಮ್ ಜೆ ಆಯ್ ವಕೀಲರಿಂದ

1. ಸಾಕ್ಷಿಗೆ ತಾವು ಈಗ ಎಲ್ಲಿಂದ ಬಂದಿರುತ್ತೀರಾ ಎಂದರೆ ಸಿಂದಗಿಯಿಂದ ಬದಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ತಾಯಿ ಊರು ಘತ್ತರಗಿ ಇರುತ್ತದೆ. ನಾನು ನನ್ನ ತಾಯಿ ಮನೆಯಲ್ಲೆ ವಾಸವಾಗಿದ್ದು ಸಿಂದಗಿಯಲ್ಲಿ ವಾಸವಾಗಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ನಾನು ಸಿಂದಗಿಯ ಟೆಕಿಯಾ ಟಲ್ಲಿಯಲ್ಲಿ ವಾಸ ಮಾಡುವುದು ನಮೂದು ಮಾಡಿದ್ದು ಸ್ವಂತ ಮನೆ ಇರುತ್ತದೆಯೇ ಅಥವಾ ಬಾಡಿಗೆ ಮನೆಯಲ್ಲಿರುತ್ತೀರಾ ಎಂದರೆ ಸಾಕ್ಷಿ ನಮ್ಮ ಮಾವನ ಮನೆಯಲ್ಲಿ ಇರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಸಿಂದಗಿಯಲ್ಲಿ ವಾಸವಾಗಿಲ್ಲ ನಾನು ನನ್ನ ತಂದೆ ಮನೆಯಲ್ಲಿ ವಾಸವಾಗಿರುತ್ತೀರಾ ಎಂದರೆ ಸಾಕ್ಷಿ ನಾನು ಸಿಂದಗಿಯಲ್ಲಿ ವಾಸವಾಗಿದ್ದೆನೆ ಎಂದು ನುಡಿದಿರುತ್ತಾರೆ.

2. ನನ್ನ ಮದುವೆ ಶಿವಣಗಿ ನನ್ನ ಗಂಡನ ಮನೆಯಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ಅರ್ಜಿ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಮದುವೆ ಕಾಲಕ್ಕೆ 5 ತೊಲೆ ಬಂಗಾರವನ್ನು ನೀಡಿರುವುದಾಗಿ ನಮೂದಿಸಿದ್ದು ಅದಕ್ಕೆ ಸಂಬಂಧಿಸಿದಂತೆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. 5 ಲಕ್ಷ ರೂಪಾಯಿ ಮದುವೆಗೆ ಖರ್ಚು ಮಾಡಿರುವುದಾಗಿ ಸುಳ್ಳು ನಮೂದು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

3. ಮದುವೆಯ ಕಾಲಕ್ಕೆ ನನ್ನ ಗಂಡ ಮಹರ ರೂಪದಲ್ಲಿ 1 ತೊಲೆ ಬಂಗಾರವನ್ನು ನೀಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಅವರ ಊರಿನಲ್ಲಿ 8-10 ಅಂಗಡಿಗಳ ಕಟ್ಟಡ ಕಟ್ಟಿ ಬಾಡಿಗೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ನನ್ನ ಪಾಲಿಗೆ 3 ಅಂಗಡಿಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. 3

ಅಂಗಡಿಗಳನ್ನು ನನ್ನ ಪಾಲಿಗೆ ನೀಡಿದ್ದು ಒಂದೊಂದು ಅಂಗಡಿಗೆ ತಲಾ 5 ಸಾವಿರದಂತೆ ತಿಂಗಳಿಗೆ 15 ಸಾವಿರ ಬಾಡಿಗೆ ಬರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನಿಗೆ ಹೇಳದ ನನ್ನ ತಾಯಿಗೆ ಮನೆಗೆ ಬಂದು ಬಾಡಿಗೆ ಹಣ ಪಡೆದು ಆರಾಮ ಇದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಆತನ ಮನೆಯವರು ನನಗೆ ತೊಂದರೆ ಮಾಡುತ್ತಿದ್ದರು ಎಂದು ನನ್ನಅರ್ಜಿಯಲ್ಲಿ ಸುಳ್ಳು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ವಯಸ್ಸಾಗಿದೆ ಎಂದರೆ ಸರಿ. ನನ್ನ ಗಂಡನಿಗೂ ಸಹ ಸಕ್ಕರೆ ಕಾಯಿಲೆ ಹೆಚ್ಚಾಗಿ ಮಾತನಾಡಲು ಬರುವುದಿಲ್ಲ ಎಂದರೆ ಸಾಕ್ಷಿ ವಕೀಲರಿಗೆ ನಾನು ಮತ್ತು ಮಕ್ಕಳು ಏನು ಮಾಡಬೇಕೆಂದು ಮರು ಪ್ರಶ್ನೆ ಮಾಡಿರುತ್ತಾರೆ. ನನ್ನ ಅರ್ಜಿಯಲ್ಲಿ ನನ್ನ ಗಂಡ ಮತ್ತು ಅವರ ಮನೆ ಯರು ನನಗೆ ತೊಂದರೆ ಮಾಡಿ ತವರು ಮನೆಯಿಂದ ಹಣವನ್ನು ತರುವಂತೆ ತೊಂದರೆ ಮಾಡಿರುತ್ತಾರೆ ಎಂದು ಸುಳ್ಳು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ನನ್ನ ಮತ್ತು ಎದುರುದಾರರ ಸಮಸ್ಯೆ ಕುರಿತು ರಾಜೀ ಸಂಧಾನ ಆದಾಗ 5 ಲಕ್ಷ ರೂಪಾಯಿ ಕೊಟ್ಟಲ್ಲಿ ಮಾತ್ರ ಕರೆದುಕೊಂಡು ಹೋಗುವದಾಗಿ ಹೇಳಿದ್ದ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ಗಂಡನನ್ನು ಬಿಟ್ಟು ಬಂದಾಗಿನಿಂದ ಆತನಿಗೆ ನೋಡಿಕೊಳ್ಳುವವರು ಇಲ್ಲದೇ ಆತ ಸಂಬಂಧಿಕರ ಹತ್ತಿರ ಆಹಾರ ಪಡೆಯುತ್ತಿದ್ದಾನೆ ಎಂದರೆ ಸಾಕ್ಷಿ ಆತ ಸರಿಯಾಗಿ ಇಟ್ಟುಕೊಂಡಲ್ಲಿ ನಾವು ಇರಬಹುದು ಎಂದು ನುಡಿದಿರುತ್ತಾರೆ. ನನ್ನ ಗಂಡನಿಗೆ ಹೇಳದೆ ಮಕ್ಕಳನ್ನು ಕರೆದುಕೊಂಡು ಮನೆಯಿಂದ ಬಂದು ನನ್ನ ತಾಯಿ ಮನೆಯಲ್ಲಿ ಅಂಗಡಿ ಬಾಡಿಗೆ ಪಡೆದುಕೊಂಡು ಇದ್ದೇನೆ ಎಂದರೆ ಸರಿಯಲ್ಲ. ಎದುರುದಾರ ಈಗಲು ಸಹ ಕರೆದುಕೊಂಡು ಹೋಗಲು ತಯಾರು ಇರುತ್ತಾನೆ ಹೋಗುತ್ತಿಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

5. ಸಧ್ಯ ನನಗೆ ಆದಾಯ ಇರುವ ಕಾರಣ ನನ್ನ ಗಂಡನ ಮನೆಗೆ ಹೋಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನನ್ನನ್ನು ಸರಿಯಾಗಿ ನೋಡಿಕೊಂಡರೆ ಏಕೆ ಬರುತ್ತಿದ್ದೆ ಎಂದು ಉತ್ತರಿಸಿರುತ್ತಾರೆ. ಶಿವಣಗಿ ಗ್ರಾಮದಲ್ಲಿ ನಾನು ನನ್ನ ಗಂಡ ಮಕ್ಕಳು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವು ಎಂದರೆ ಸರಿ. ಆತ ಹೊಲದಲ್ಲಿ ಕೆಲಸ ಮಾಡಿ ನನ್ನನ್ನು ಮತ್ತು ಮಕ್ಕಳನ್ನು ಸರಿಯಾಗಿ

ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗಲು ಸಹ ನನ್ನ ಗಂಡ ನನ್ನನ್ನು ಸರಿಯಾಗಿ ನೋಡಿಕೊಳ್ಳಲು ತಯಾರು ಇದ್ದರೂ ಸಹ ನಾನು ಆತನ ಮೇಲೆ ಸುಳ್ಳು ಆಪಾದನೆ ಮಾಡಿ ನಾನೇ ಮನೆಯಿಂದ ಆಚೆ ಬಂದು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರನಿಗೆ ನಾನು ತೊಂದರೆ ಮಾಡುವ ಸಲುವಾಗಿ ನಾನು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,ಸಿಂದಗಿ